ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ
ICAR JSS Krishi Vigyan Kendra
Suttur - 571 129, Nanjangud Taluk, Mysuru District
☎: 08221-232218 | 🖷: 08221-232377 | jsskvk@gmail.com | www.jsskvk.in

# ವಿಶ್ವ ಪರಿಸರ ದಿನಾಚರಣೆ

**ಪ್ಲಾಸ್ಟಿಕ್ ಬಳಕೆಯ ಅವಲಂಬನೆಯನ್ನು ಕಡಿತಗೊಳಿಸಿ, ಪ್ಲಾಸ್ಟಿಕ್ ಇಲ್ಲದೆ, ಒಂದು ಕ್ಷಣ, ಒಂದು ದಿನವನ್ನು ಕಳೆಯಲಾಗದಷ್ಟು ನಾವು ಪ್ಲಾಸ್ಟಿಕ್ ಮೇಲೆ ಅವಲಂಬಿತರಾಗಿದ್ದೇವೆ.ಇದೆಂತಹ ದುರಂತ?.**

ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ ನವರು ಸುತ್ತೂರಿನ ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರದಿಂದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಹೋಗಿದೆ. ಪ್ಲಾಸ್ಟಿಕ್ ಭೂಮಿಯಲ್ಲಿ ಲೀನವಾಗಲು 100ಕ್ಕೂ ಹೆಚ್ಚು ವರ್ಷಗಳು ಬೇಕಾಗುವುದರಿಂದ ಸಾಧ್ಯವಾದಷ್ಟು ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆಗೊಳಿಸಿ ಪರಿಸರವನ್ನು ಹಾಗೂ ಭೂಮಿನ್ನು ರಕ್ಷಿಸಿ  ಎಂದು ಕರೆನೀಡಿದರು.

ಅತಿಥಿಗಳಾಗಿ ಆಗಮಿಸಿದ್ದ ಪ್ರಗತಿಪರ ರೈತರಾದ ಶ್ರೀ ಮಾದಪ್ಪನವರು ಮಾತನಾಡಿ ಆಧುನಿಕ ಕೃಷಿ ಪದ್ಧತಿಯಲ್ಲಿ ಪ್ಲಾಸ್ಟಿಕ್ ಹೊದಿಕೆ ಬಳಕೆಯಿಂದಾಗಿ ಗೊಬ್ಬರದ ಜೊತೆ ಪ್ಲಾಸ್ಟಿಕ್ ಕೂಡ ರೈತರ ಭೂಮಿಯಲ್ಲಿ ಸೇರಿಕೊಂಡು ಮಣ್ಣಿನ ಆರೋಗ್ಯ ಕ್ಷೀಣಿಸುತ್ತಿದೆ. ಆದ ಕಾರಣ ರೈತರು ಪ್ಲಾಸ್ಟಿಕ್ ಹೊದಿಕೆಯ ಬಳಕೆಯನ್ನು ಪುನರ್‌ಪರಿಶೀಲಿಸುವುದು ಸೂಕ್ತ. ಈ ನಿಟ್ಟಿನಲ್ಲಿ ಸರ್ಕಾರವು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಅಭಿಪ್ರಾಯಪಟ್ಟರು.

ಮತ್ತೋರ್ವ ಅತಿಥಿಗಳಾಗಿ ಆಗಮಿಸಿದ್ದ ಪ್ರಗತಿಪರ ರೈತರಾದ ಶ್ರೀ ಅಬ್ದುಲ್ ಘನಿಖಾನ್ ರವರು ಅಭಿವೃದ್ಧಿಯ ಹೆಸರಿನಲ್ಲಿ ರಸ್ತೆಯ ಅಗಲೀಕರಣದ ದಿಂದಾಗಿ ದಶಕಗಳಿಂದ ಬೆಳೆದ ಮರಗಳನ್ನು ಕತ್ತರಿಸಿ, ತದನಂತರ ಪರ್ಯಾಯವಾಗಿ ಗಿಡಗಳನ್ನು ನೆಟ್ಟು ಪೋಷಿಸದಿದ್ದರೆ ಮುಂದಿನ ಪೀಳಿಗೆಗೆ ಉತ್ತಮವಾದ ಪರಿಸರವನ್ನು ನೀಡಲು ಸಾಧ್ಯವಿಲ್ಲ ಎಂದು ಅಭಿಪ್ರಾಪಟ್ಟರು.

ಕಾರ್ಯಕ್ರಮ ಪ್ರಾಸ್ತಾವಿಕ ನುಡಿಗಳನ್ನಾಡಿದ ಕೆವಿಕೆಯ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಅರುಣ್ ಬಳಮಟ್ಟಿಯವರು ಅಧುನಿಕತೆಯತ್ತ ಮುಖಮಾಡಿರುವ ಮನುಷ್ಯನು ಹೆಚ್ಚು ಹೆಚ್ಚು ಪ್ಲಾಸ್ಟಿಕ್ ಬಳಸಿ ಪರಿಸರವನ್ನು ಕಲುಷಿತಗೊಳಿಸುತ್ತಿದ್ದಾನೆ. ಕಾರ್ಖಾನೆಯಿಂದ ಬರುವ ತ್ಯಾಜ್ಯ ನೀರು ನೇರವಾಗಿ ನದಿ-ಕೆರೆಗಳಿಗೆ ಬಿಡದೆ ಸಂಸ್ಕರಿಸಿ ಮರುಬಳಕೆ ಕೆಲಸ ಕಡ್ಡಾಯವಾಗಿ ಆಗಬೇಕಾಗಿದೆ ಎಂದರು. ಕಲ್ಲಿದ್ದಲು, ಅಣುಶಕ್ತಿ ಉಪಯೋಗಿಸಿಕೊಂಡು ವಿದ್ಯುತ್‌ಚಕ್ತಿ ಉತ್ಪಾದಿಸುವ ಬದಲು ಸೋಲಾರ್ ಶಕ್ತಿಯನ್ನು ಹೆಚ್ಚು ಹೆಚ್ಚು ಬಳಕೆ ಮಾಡಿ ಪರಿಸರದ ಮೇಲಿನ ಒತ್ತಡವನ್ನು ಕಡಿಮೆ ಮಾಡಬೇಕೆಂದು ಹಾಗೂ ಪರಿಸರ ಪ್ರಜ್ಞೆ ನಮ್ಮೆಲ್ಲರಲ್ಲೂ ಇರಬೇಕು, ಇದರ ಜವಾಬ್ದಾರಿ ಕೇವಲ ಸರ್ಕಾರದ್ದು ಮಾತ್ರವಲ್ಲ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಮಿತವಾದ ಪ್ಲಾಸ್ಟಿಕ್ ಬಳಕೆಯ ಕುರಿತು ರೈತರಿಗೆ ಮನವರಿಕೆ ಮಾಡಿಕೊಟ್ಟರು. ಅತಿಥಿಗಳು ಗಿಡನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಇದೇ ಸಂದರ್ಭದಲ್ಲಿ ಕೃಷಿ ತ್ಯಾಜ್ಯಗಳನ್ನು ಪುಡಿಮಾಡಿ ಗೊಬ್ಬರಮಾಡುವ ಟ್ರ್ಯಾಕ್ಟರ್ ಚಾಲಿತ 'ಶ್ರೆಡ್ಡರ್' ಯಂತ್ರವನ್ನು ರೈತರಿಗೆ ಹಾಗೂ ಅತಿಥಿಗಳಿಗೆ ಪ್ರಾತ್ಯಕ್ಷಿಕೆ ಮೂಲಕ ತೋರಿಸಲಾಯಿತು.  ಕಾರ್ಯಕ್ರದಲ್ಲಿ 70ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.